ಮೈ ಪೂರಾ ಬೆವೆತು ಒದ್ದೆಯಾಗಿತ್ತು. ಮೆದುಳು ಸಂಪೂರ್ಣವಾಗಿ ಶೂನ್ಯದಲ್ಲಿ ಬಿದ್ದಂತಾಗಿ ಕ್ಷಣ ತಾನೆಲ್ಲಿರುವೆನೆಂಬುದನ್ನೇ ಮರೆತುಬಿಟ್ಟ. ಶೂನ್ಯದಿಂದ ಹೊರಬಿದ್ದ ಮೆದುಳು ಕೂಡಲೇ ಪ್ರಜ್ಞೆಯನ್ನು ತುಂಬಿಕೊಳ್ಳತೊಡಗಿದಂತೆ ತಾನು ಕೋಲ್ಕತ್ತಾದ ಐಷಾರಾಮಿ ಹೋಟಲ್ ಐಟಿಸಿ ರಾಯಲ್ ಬೆಂಗಾಲ್‌ನ ಲಕ್ಸುರಿ suiteನ ಮೆತ್ತನೆಯ ಹಾಸಿಗೆಯ ಮೇಲೆ ಮಲಗಿರುವುದು ಅರಿವಿಗೆ ಬಂದಿತ್ತು. ಗೋಡೆಗೆ ನೇತಾಕಿದ್ದ ಇಟಾಲಿಯನ್ ಆಂಟಿಕ್ ಗಡಿಯಾರದಲ್ಲಿ ಸಮಯ ಆರು ಗಂಟೆ ತೋರುತ್ತಿತ್ತು. ಪ್ರಸ್ತುತದ ಸಮಯ **ante meridian**ದೋ **post meridian**ದೋ ಎಂದು ಕ್ಷಣ ಗೊಂದಲಕ್ಕೆ ಬಿದ್ದವನಿಗೆ ಪ್ರಜ್ಞೆಯ ಅರಿವು ಸ್ಪಷ್ಟವಾಗತೊಡಗಿ ಅದು **post meridian**ದೇ ಎಂಬುದು ನಿಚ್ಚಳವಾಗಿತ್ತು. ಮಧ್ಯಾಹ್ನ ಒಂದು ಗಂಟೆಗೆ ಕೋಲ್ಕತ್ತಾದ ಸುಭಾಷ್ ಚಂದ್ರ ಬೋಸ್ ಇಂಟರ್ ನ್ಯಾಶನಲ್ ಏರ್‌ಪೋರ್ಟ್‌ನಲ್ಲಿ ಇಳಿದಾಗ ಸಣ್ಣಗೆ ಮಳೆ ಹನಿಯುತ್ತಿತ್ತು. ಏರ್‌ಪೋರ್ಟ್ ಅರೈವಲ್ ಗೇಟಿನಲ್ಲಿ ಹೈಸ್ಕೂಲ್ ಕ್ಲಾಸ್‌ಮೇಟ್ ಜಡ್ಡಿಗದ್ದೆಯ ಮಧುಕೇಶ್ವರ ಕಾಯುತ್ತಿದ್ದ. ಅವನದೇ ಕಾರಿನಲ್ಲಿ ಹೋಟೆಲ್ಲಿಗೆ ಕರೆತರುವಾಗ, ''ಅಲ್ಲ ಮಾರಾಯಾ, ಇಷ್ಟು ಕಾಸ್ಟ್ಲಿ ಹೋಟೆಲ್ ಎಂಥಕ್ಕೆ ಬುಕ್ ಮಾಡಿದೆ. ಎರಡು ಸಾವಿರ ರೂಪಾಯಿಯಲ್ಲಿ ಎಂತೆಂಥ ಹೈಕ್ಲಾಸ್ ಹೋಟೆಲ್ ಸಿಗ್ತಾವೆ ಗೊತ್ತುಂಟಾ ಈ ಕೋಲ್ಕತ್ತಾದಲ್ಲಿ...'' ಎಂದು ಆಕ್ಷೇಪಿಸುವವನಂತೆ ಮಾತು ತೆಗೆದಿದ್ದ. ''ಅರೆ, ಬಿಡು ಮಾರಾಯಾ, ಇಪ್ಪತ್ತು ದಿನಗಳ ಹಿಂದೆ ಆನ್‌ಲೈನ್‌ನಲ್ಲಿ ಬುಕ್ ಮಾಡಿದ್ದು, ಮೂವತ್ತು ಪರ್ಸೆಂಟ್ ಡಿಸ್ಕೌಂಟ್ ಬೇರೆ ಇತ್ತು. ಅದೂ ಅಲ್ಲದೆ ನಾನೇನು ನಿನ್ನ ಹಾಗೆ ಪರ್ಮನೆಂಟಾಗಿ ಕೋಲ್ಕತ್ತಾದಲ್ಲಿರೋಕೆ ಬಂದಿದ್ದೀನಾ. ಎರಡು ದಿನ ಅಷ್ಟೆ, ನಾಡಿದ್ದು ಮಧ್ಯಾಹ್ನ ರಿಟರ್ನ್ ಟಿಕೆಟ್ ಬುಕ್ ಆಗಿದೆಯಲ್ಲ...'' ಎಂದು ನಕ್ಕಿದ್ದ. ಹೋಟೆಲ್ ರೂಮು ಅರಮನೆಯೊಂದರ ರಾಜಕುಮಾರನ ಕೊಠಡಿಯಂತೆಯೇ ಇತ್ತು. ಇರಲಾರದೇನು ಮತ್ತೆ, ರೂಮಿನ ಒಂದು ದಿನದ ಬಾಡಿಗೆಯೇ ಹದಿನೆಂಟು ಸಾವಿರ ರೂಪಾಯಿಗಳು! ''ಹಾಂ, ಹತ್ತು ಲಕ್ಷ ಬೆಲೆ ಬಾಳುವ ಒಂದೊಂದು ಎಕರೆ ಜಮೀನು ತಲಾ ಐವತ್ತು ಲಕ್ಷಕ್ಕೆ ಸುಲಭಕ್ಕೆ ಮಾರಾಟವಾಯಿತಲ್ಲ. ನಿನಗೆ ಅದರ ಕಿಕ್ಕೇರಿರಬೇಕು ಬಿಡು...'' ಎಂದು ಮಧುಕೇಶ್ವರ ಮೆತ್ತನೆಯ ಸೋಫಾದ ಮೇಲೆ ಕುಳಿತುಕೊಳ್ಳುತ್ತಾ, ''ಸಂಜೆ ಏಳು ಗಂಟೆಗೆ ರೆಡಿಯಾಗಿರು. ಟ್ಯಾಕ್ಸಿಯಲ್ಲಿ ಹೋಗಿ ಆರಾಮಾಗಿ ಅರ್ಧರಾತ್ರಿಯವರೆಗೂ ಸುತ್ತಾಡಿಕೊಂಡು ಬರುವ.'' ಎನ್ನುವಷ್ಟರಲ್ಲಿ ಹೋಟೆಲ್ ಸೂಪರ್‌ವೈಸರ್ ಬಂದು, ''ಕಾಂಪ್ಲಿಮೆಂಟರಿ ಲಂಚ್ ಇದೆ ವಿಥ್ ಡ್ರಿಂಕ್ಸ್. ಇಬ್ಬರಿಗೆ ಪ್ರಾವಿಷನ್ ಇದೆ. ರೂಮಿಗೂ ಸರ್ವೀಸ್ ಇದೆ'' ಎಂದಿದ್ದ. ಅಲ್ಲಮಪ್ರಭು ಮಾತನಾಡುವುದಕ್ಕೆ ಮೊದಲೇ ಮಧುಕೇಶ್ವರ, ''ರೂಮಿಗೇ ಸರ್ವೀಸ್ ಕೊಟ್ಟು ಬಿಡಿ, ಡ್ರಿಂಕ್ಸ್ ಒಳ್ಳೆಯದಿರಲಿ...'' ಎಂದು ತಾನೇ ಹೇಳಿಬಿಟ್ಟಿದ್ದ.

ಅಲ್ಲಮಪ್ರಭು ರೆಸ್ಟ್‌ರೂಮಿಗೆ ಹೋಗಿ ಫ್ರೆಶಪ್ ಆಗಿ ಬರುವಷ್ಟರಲ್ಲಿ ಡ್ರಿಂಕ್ಸ್ ಮತ್ತು ಎರಡು ವಿಧದ ನಾನ್‌ವೆಜ್ ಡಿಶ್‌ಗಳು ಬಂದು ಸೋಫಾದ ಮುಂದಿದ್ದ ದೊಡ್ಡ ಟೀಪಾಯಿಯನ್ನು ಅಲಂಕರಿಸಿದ್ದವು. ಡ್ರಿಂಕ್ಸ್ ಆದ ತಕ್ಷಣ ಏನು ಊಟ ತರಬೇಕೆಂದು ರೂಂ ಬಾಯ್‌ಗೆ ಮಧುಕೇಶ್ವರನೇ ಆರ್ಡರ್ ಮಾಡಿದ್ದ. ''ಅರೆ, ಎಷ್ಟು ಫಾಸ್ಟ್ ಇದೆ ಸರ್ವೀಸ್, ಅದೂ ಕಾಂಪ್ಲಿಮೆಂಟರಿ ಲಂಚ್...'' ಎಂದು ಅಚ್ಚರಿ ಪಡುತ್ತಾ ಸೋಫಾದ ಮೇಲೆ ಕುಳಿತಿದ್ದ ಅಲ್ಲಮಪ್ರಭು. ಎರಡು ಗ್ಲಾಸುಗಳಿಗೆ ವಿಸ್ಕಿ, ಸೋಡಾ, ನೀರನ್ನು ಬೆರೆಸುತ್ತಾ, ''ನಿನ್ನ ರೂಮಿನ ಟ್ಯಾರಿಫ್‌ನಲ್ಲಿಯೇ ಇಂಥ ಪುಗಸಟ್ಟೆ ಕೊಡುಗೆಗಳನ್ನೆಲ್ಲ ಸೇರಿಸಿಬಿಟ್ಟಿರುತ್ತಾರೆ. ನಯವಂಚನೆಯೇ ನಗರ ವ್ಯಾಪಾರದ ಮುಖ್ಯಪ್ರಾಣ...'' ಎಂದ ಮಧುಕೇಶ್ವರ ಚೀಯರ್ಸ್ ಹೇಳಿ ವಿಸ್ಕಿ ಗ್ಲಾಸನ್ನು ಬಾಯಿಗಿಟ್ಟುಕೊಂಡಿದ್ದ. ''ಯಾವ ವ್ಯಾಪಾರದಲ್ಲಿ ನಯವಂಚನೆ, ಲಾಭದ ಕೋಶಗಳಿಲ್ಲ ಹೇಳು. ನಿನ್ನ ಪಿಂಪ್ ಕೆಲಸದಲ್ಲಿ ಬೇರೆಲ್ಲ ವ್ಯಾಪಾರಗಳಿಗಿಂತಲೂ ಹೆಚ್ಚು ನಯವಂಚನೆಯ ಪಾಚಿ ಕಟ್ಟಿಕೊಂಡಿದೆ. ಮೂವತ್ತು ವರ್ಷದ ವೇಶ್ಯೆಗೆ ಕೇವಲ ಇಪ್ಪತ್ತು ವರ್ಷ